ಬಹುಕಾಲದ ಗೆಳೆಯ ಶಂಕರ ಅಮೆರಿಕದಿಂದ ರಾಮುವನ್ನ ಸಂಪರ್ಕಿಸಿದ್ದ. ಅವನ ಜೊತೆ ಮಾತುಕತೆ ಎಷ್ಟೋ ತಿಂಗಳಿಂದ ಇರಲಿಲ್ಲ. 'ಕ್ಷಮಿಸು, ನಿನಗೆ ತಿಳಿಸದೆ ಬರಬೇಕಾಯಿತು.' ಸಾಕಷ್ಟು ಸಮಯ ಮಾತಾಡಿದ. ಕೊನೆಯಲ್ಲಿ ರಾಮು, 'ನಿನಗೆ ಸಮಯ ಸಿಕ್ಕಿದರೆ ನನ್ನ ಅಪ್ಪನನ್ನು ನೋಡಿ ಬಾ' ಎಂದು ವೃದ್ಧಾಶ್ರಮದ ವಿಳಾಸ ಕೊಟ್ಟ. ಒಂದು ಕ್ಷಣ ರಾಮುವಿಗೆ ಶಾಕ್ ಆಯಿತು. ಹಾಗೆ ನೋಡಿದರೆ ಶಂಕರನ ಕುಟುಂಬದ ಎಲ್ಲರೂ ರಾಮುವಿಗೆ ಬಾಲ್ಯದಿಂದಲೂ ಆಪ್ತರಾದವರು.

ಅವರ ಮನೆಯಲ್ಲಿ ಎಷ್ಟೊಂದು ಆಡಿ ಬೆಳೆದವನು. ರಾಮುವಿನ ಅಮ್ಮ–ಅಪ್ಪನಿಗೂ ಅವರಿಗೂ ಸ್ನೇಹದ ದೃಷ್ಟಿಯಿಂದ ಅನ್ಯೋನ್ಯತೆ ಇತ್ತು. ಶಂಕರನ ತಾಯಿ ರಾಧಮ್ಮ ಎಂಥ ವಿಶಾಲ ಮನಸ್ಸಿನವರು. ಹಾಗೆಯೇ ಅವನ ತಂದೆ ಗೋಪಾಲಯ್ಯ ಅತ್ಯಂತ ಜಾಲಿ ಮನುಷ್ಯರು. ನಮ್ಮ ಜೊತೆ ಚಿಕ್ಕ ಹುಡುಗರಂತೆ ಆಟದಲ್ಲಿ ಭಾಗಿಯಾಗುತ್ತಿದ್ದರು. ಸಮಯ ಸಿಕ್ಕಿದಾಗಲೆಲ್ಲ ಗಂಭೀರವಾದ ಸಾಮಾಜಿಕ ಸಂಗತಿಗಳನ್ನೆಲ್ಲ ನಮ್ಮ ಮುಂದಿಡುತ್ತಿದ್ದರು. ಒಂದು ದಿನವೂ ಅವರ ಮಾತಿನಲ್ಲಿ ಕೆಟ್ಟ ನುಡಿಯನ್ನು ಕೇಳಿಲ್ಲ. 'ನಮ್ಮ ಬದುಕು ಯಾವಾಗಲೂ ಕೊಡುವ ಕೈಯಾಗಬೇಕೇ ವಿನಾ ಚಾಚುವ ಕೈಯಾಗಬಾರದು. ಹಾಗೆಯೇ ನಮಗೆ ನಿಸರ್ಗ ಕೊಡುತ್ತಲೇ ಹೋಗುತ್ತದೆ, ನಮ್ಮ ಪಾಪಕೃತ್ಯಗಳನ್ನೆಲ್ಲಾ ಪಕ್ಕಕ್ಕೆ ಸರಿಸಿ' ಎಂದು ಸೂಕ್ಷ್ಮವಾಗಿ ಸರಳ ನುಡಿಗಳಲ್ಲಿ ನಮ್ಮ ಮುಂದಿಡುತ್ತಿದ್ದರು. ತಮ್ಮ ಬದುಕಿನಲ್ಲಿ ಬಂದುಹೋದ ಸರಳ ವ್ಯಕ್ತಿಗಳ ಪರಿಚಯವನ್ನು 'ಬಾಲಮಿತ್ರ' ಮತ್ತು 'ಚಂದಮಾಮ'ದ ಕಥೆಗಳ ರೀತಿಯಲ್ಲಿ ಹೇಳುತ್ತಿದ್ದರು. ನಮಗೆ ಅದು ಎಂದೂ ಉಪದೇಶ ಅನ್ನಿಸುತ್ತಿರಲಿಲ್ಲ. ಅವರು ತುಂಬು ಕುಟುಂಬದಿಂದ ಬಂದವರು. ಅಲ್ಲಿಯ ಪರಸ್ಪರ ಹೊಂದಾಣಿಕೆಯ ಸೂಕ್ಷ್ಮಗಳನ್ನು ಅರ್ಥೈಸಿಕೊಂಡು ಬೆಳೆದು ಬಂದವರು. ಆದ್ದರಿಂದಲೇ ಅತ್ಯಂತ ಸಹನಾಮಯಿಯಾಗಿದ್ದರು. ಅವರು ಒಮ್ಮೆಯೂ ಸಿಟ್ಟಿನಿಂದ ಅಥವಾ ಗಡಸಿನಿಂದ ಮಾತಾಡಿದ್ದನ್ನು ಕಂಡಿಲ್ಲ. ಮಗ ಶಂಕರನನ್ನು 'ಬಾರಯ್ಯ, ಹೋಗಯ್ಯ' ಎಂದು ಸಂಬೋಧಿಸುತ್ತಿದ್ದರು.

ತಮ್ಮ ಪತ್ನಿಯ ಜೊತೆ ಮಾತಾಡುವಾಗಲೂ ಮೆಲು ಧ್ವನಿಯಿಂದ 'ಬಾಮ್ಮ, ಹೋಗಮ್ಮ' ಎಂದು ಕರೆಯುವಾಗಲೂ ಅದರ ಹಿಂದಿನ ಆಪ್ತ ಧ್ವನಿಯು ಎಷ್ಟು ವಿನಯದಿಂದ ತುಂಬಿಕೊಂಡಿರುತ್ತಿತ್ತು. ಹಾಗೆ ನೋಡಿದರೆ ಶಂಕರನನ್ನು ವಿದೇಶಕ್ಕೆ ಕಳಿಸಲು ಕಿಂಚಿತ್ತೂ ಮನಸ್ಸಿರಲಿಲ್ಲ. ಇಲ್ಲಿಯೇ ದುಡಿದು ಬೆಳೆಯಲು ಸಾಕಷ್ಟು ಒಳದಾರಿಗಳಿವೆ ಎಂದು ಗಾಢವಾಗಿ ನಂಬಿದ್ದರು.

ಮಗ ಶಂಕರ ಮತ್ತು ರಾಮು ಇಬ್ಬರೂ ಒಟ್ಟಿಗೆ ಇಂಜಿನಿಯರಿಂಗ್ ಪದವೀಧರರಾದರು. ಒಳ್ಳೆಯ ನೌಕರಿಯೂ ಸಿಕ್ಕಿತು. ಮಗನಿಗೆ ದೊಡ್ಡ ಕುಟುಂಬದಿಂದ ಹೆಣ್ಣು ತಂದು ಮದುವೆ ಮಾಡಿದರು. ಹೆಂಡತಿಯ ಸಂಬಂಧದ ಕಡೆಯವರ ಒತ್ತಡಕ್ಕೆ. ಆ ಹುಡುಗಿಯೂ ಸಾಫ್ಟ್‌ವೇರ್ ಇಂಜಿನಿಯರಿಂಗ್ ಪದವೀಧರೆಯಾಗಿದ್ದಳು. ಆಕೆಗೂ ಕೆಲಸ ಸಿಕ್ಕಿತು. ಇಬ್ಬರಿಗೂ ಕೈತುಂಬಾ ಸಂಬಳ. ಆದರೆ ಎಲ್ಲೋ ಕುಟುಂಬದಲ್ಲಿ ಹೊಂದಾಣಿಕೆ ಸರಿಯಿಲ್ಲ ಎಂದು ರಾಮುವಿಗೆ ಅನಿಸುತ್ತಿತ್ತು. ಇದು ಸ್ವಾಭಾವಿಕ, ಹೊರಗಿನ ಹೆಣ್ಣು ಬಂದು ಹೊಂದಿಕೊಳ್ಳುವತನಕ ಎಂದು ಭಾವಿಸಿದ. ಇದರ ಬಗ್ಗೆ ಶಂಕರನ ಬಳಿ ಪ್ರಸ್ತಾಪಿಸಲು ಹೋಗಲಿಲ್ಲ. ಆದರೆ ಶಂಕರ, ಅಮ್ಮ–ಅಪ್ಪ ಮತ್ತು ಗೆಳೆಯ ರಾಮುವಿಗೆ ತಿಳಿಸದೆ ವಿದೇಶಕ್ಕೆ ಹೋಗಲು ಗಂಡ ಹೆಂಡತಿ ವ್ಯವಹರಿಸುತ್ತಿದ್ದರು. ಈ ಮಧ್ಯೆ ರಾಧಮ್ಮ ಅವರ ಆರೋಗ್ಯ ಸರಿಯಾಗಿಲ್ಲ ಎಂಬ ವಿಷಯ ರಾಮುವಿನ ಕಿವಿಯ ಮೇಲೆ ಬಿತ್ತು. ಹೋಗಿ ಮಾತಾಡಿಸಿಕೊಂಡು ಬಂದ. ಗೋಪಾಲಯ್ಯನವರೂ ಸಾಕಷ್ಟು ಕುಗ್ಗಿ ಹೋಗಿದ್ದರು. ಇದಕ್ಕೆ ಸಂಬಂಧಿಸಿದಂತೆ ಶಂಕರನ ಬಳಿ ಮಾತಾಡಿ ಬಂದ. ಅದಕ್ಕೆ ಅವನು, 'ವೈದ್ಯರಿಗೆ ತೋರಿಸಿದ್ದಕ್ಕೆ ಅವರು ವಯೋಮಾನಕ್ಕೆ ತಕ್ಕಂತೆ ಸ್ವಲ್ಪ ದುರ್ಬಲರಾಗಿದ್ದಾರೆ' ಎಂದು ಹೇಳಿದ್ದನ್ನು ತಿಳಿಸಿದ್ದ. ನಂತರ ರಾಧಮ್ಮ ಮತ್ತು ಗೋಪಾಲಯ್ಯ ಅವರ ಬಳಿ ಮಾತಾಡಿ ಧೈರ್ಯದ ಮಾತಾಡಿ ಬಂದಿದ್ದ. ಇದಾದ ಕೆಲವು ತಿಂಗಳುಗಳ ನಂತರ ರಾಧಮ್ಮನವರು ಹೃದಯಾಘಾತದಿಂದ ನಿಧನ ಹೊಂದಿದ್ದರು.

ರಾಮು ತನ್ನ ತಂದೆ–ತಾಯಿ ಮತ್ತು ಹೆಂಡತಿಯ ಸಮೇತ ಅಂತ್ಯ ಕಾರ್ಯಗಳಲ್ಲಿ ಭಾಗಿಯಾಗಿ ಬಂದಿದ್ದ. ಈ ಮಧ್ಯೆ ಎರಡು ಮೂರು ಬಾರಿ ಗೋಪಾಲಯ್ಯನವರ ಕ್ಷೇಮದ ಬಗ್ಗೆ ದೂರವಾಣಿಯಲ್ಲಿ ಮಾತಾಡಿದ್ದ. ಆದರೆ ಶಂಕರನೊಡನೆಯ ಮಾತು ಗಾಢವಾಗಿಯೇನು ಇರಲಿಲ್ಲ. ಇದಾದ ಮೂರು ತಿಂಗಳ ನಂತರ ಅವನು, ಗಂಡ ಹೆಂಡತಿ ಇಬ್ಬರಿಗೂ ಅಮೆರಿಕದಲ್ಲಿ ಉತ್ತಮ ಕೆಲಸ ಸಿಕ್ಕಿದೆಯೆಂದು ಹೊರಟಿದ್ದು ಮತ್ತು ತನ್ನ ತಂದೆಗೆ ಏನು ವ್ಯವಸ್ಥೆ ಮಾಡಿದ್ದಾನೆ ಎಂಬುದನ್ನು ತಿಳಿಸಿರಲಿಲ್ಲ. ತನ್ನ ಕೆಲಸಗಳ ಒತ್ತಡದಲ್ಲಿ ವಿಚಾರಿಸಿಕೊಳ್ಳುವುದನ್ನು ಮರೆತಿದ್ದ. ಆದರೆ ಅವನು ದೂರವಾಣಿಯ ಮೂಲಕ ತಿಳಿಸಿದಾಗ ಅವನ ಒಟ್ಟು ನಡಾವಳಿಯ ಬಗ್ಗೆ ಜಿಗುಪ್ಸೆ ಬಂದಿತ್ತು. ಆದರೂ ಅದನ್ನು ಕಿಂಚಿತ್ತು ತೋರಿಸಿಕೊಳ್ಳದೆ ಶಂಕರನ ಮಾತನ್ನು ಕೇಳಿಸಿಕೊಂಡಿದ್ದ. ಹಾಗೂ ಮನುಷ್ಯರು ಹೀಗೆ ಸ್ವಾರ್ಥಿಗಳಾಗುವುದರ ಕುರಿತು ಕೆಲವು ಕ್ಷಣ ಒದ್ದಾಡಿದ್ದ. ತನ್ನ ತಂದೆ ಎಂಥ ಉನ್ನತ ವ್ಯಕ್ತಿತ್ವವುಳ್ಳವರು ಎಂಬುದನ್ನು ಅರಿಯದೇ ಹೋದನಲ್ಲ ಎಂದು. ಮತ್ತು ವೃದ್ಧಾಶ್ರಮದಲ್ಲಿ ಎಷ್ಟೊಂದು ಒದ್ದಾಡುತ್ತಿರಬಹುದು ಎಂದು ಯೋಚಿಸಿದ. ಇದನ್ನು ತನ್ನ ಮನೆಯ ಯಾರಿಗೂ ತಿಳಿಸಲು ಹೋಗಲಿಲ್ಲ.

ಶಂಕರ ತಿಳಿಸಿದ ಮಾರನೆಯ ದಿನವೇ ವೃದ್ಧಾಶ್ರಮಕ್ಕೆ ಹೋದ. ಅದು ಬನ್ನೇರುಘಟ್ಟದ ಬಳಿ ಇದ್ದದ್ದು. ತನ್ನ ಮನೆಯಿಂದ ಸಾಕಷ್ಟು ದೂರವೇ ಇತ್ತು. ಅವರಿಗೆ ಕೊಡಲು ಸ್ವಲ್ಪ ಹಣ್ಣುಹಂಪಲು ತೆಗೆದುಕೊಂಡು ಹೋಗಿದ್ದ. ಆ ಜಾಗದ ಬಳಿ ಹೋಗಿ ನಿಂತಾಗ ಗೇಟಿನ ಬಳಿ, 'ವಯೋವೃದ್ಧರ ನೆಮ್ಮದಿಯ ತಾಣ' ಎಂದು ದೊಡ್ಡದಾದ ನಾಮಫಲಕವಿತ್ತು. ಗೇಟಿನಲ್ಲಿ ಕಾವಲುಗಾರನನ್ನು ಕೇಳಿಕೊಂಡು ಕೊಠಡಿಯ ಸಂಖ್ಯೆ ಪಡೆದು ಹೋದ. ನಾನಾ ರೀತಿಯ ವಯೋವೃದ್ಧರು ಎದುರಾದರು. ಕೆಲವರು ವಾಕಿಂಗ್ ಸ್ಟಿಕ್ ಬಳಸುತ್ತಿದ್ದರು. ಮತ್ತೆ ಕೆಲವರು ಹಾಗೆಯೇ ನಿಧಾನಗತಿಯ ನಡಿಗೆಯಲ್ಲಿ ಓಡಾಡುತ್ತಿದ್ದರು. ಹೀಗೆಯೇ ಮುಂದೆ ಹೋಗುತ್ತಿದ್ದ ಸಮಯದಲ್ಲಿ ಸ್ವಲ್ಪ ದೂರದಲ್ಲಿ ಹೊರಗೆ ಯಾರೊಡನೆಯೋ ಮಾತನಾಡುತ್ತಿದ್ದ ಗೋಪಾಲಯ್ಯನವರು ರಾಮುವನ್ನು ಕಂಡು ಉಲ್ಲಾಸದಿಂದ ರಾಮುವಿನ ಬಳಿ ಬಂದು 'ಎಂಥ ದರ್ಶನವಪ್ಪ, ಬಾ' ಎಂದು ಸಂತೋಷದಿಂದ ಬರಮಾಡಿಕೊಂಡರು. ರಾಮು ಕೊಟ್ಟ ಹಣ್ಣನ್ನು ಸ್ವೀಕರಿಸುತ್ತ ಕಣ್ಣಲ್ಲಿ ನೀರು ತುಂಬಿಕೊಂಡರು.

ಒಂದು ಕ್ಷಣ ತಲೆತಗ್ಗಿಸಿ ನಿಂತಿದ್ದರು. ನಂತರ ಚೇತರಿಸಿಕೊಂಡವರಂತೆ ತಮ್ಮ ಕೊಠಡಿಯೊಳಕ್ಕೆ ಕರೆದುಕೊಂಡು ಹೋಗಿ, 'ಇದು ನನ್ನ ಕೊನೆಗಾಲದ ಅರಮನೆಯಪ್ಪ' ಎಂದರು.

ರಾಮು ಅದಕ್ಕೆ ಹೇಗೆ ಪ್ರತಿಕ್ರಿಯಿಸಬೇಕೋ ಗೊತ್ತಾಗದೆ ತಲೆತಗ್ಗಿಸಿ ನಿಂತ. ನಂತರ ಅವರ ಎರಡೂ ಕೈಹಿಡಿದು ತಲೆಬಾಗಿದ. ರಾಮುವನ್ನು ಪಕ್ಕದಲ್ಲಿಯೇ ಇದ್ದ ಕುರ್ಚಿಯ ಮೇಲೆ ಕೂರಲು ಸೂಚಿಸಿ, 'ಈ ಹಣ್ಣೆಲ್ಲಾ ಯಾಕಪ್ಪ ತಂದೆ. ನಿನಗೆ ಏನನ್ನೂ ಕೊಡಲಾಗಲಿಲ್ಲವಲ್ಲ' ಎಂದು ಸುಮ್ಮನೆ ಕೂತರು. ಮತ್ತೆ ರಾಮುವಿನ ಮನೆಯವರನ್ನೆಲ್ಲ ವಿಚಾರಿಸಿಕೊಂಡರು.

'ಬಾಪ್ಪ ಹೊರಗೆ ಹೋಗಿ ಕೂರೋಣ' ಎಂದು ಒಂದು ಮೂಲೆಗೆ ಹೋಗಿ ಕೂತರು. ಆದರೂ ಕೆಲವರು ಒಬ್ಬೊಬ್ಬರೇ ಮತ್ತು ಕೆಲವರು ಒಂಟಿಯಾಗಿ ತಲೆತಗ್ಗಿಸಿ ನಿಧಾನಗತಿಯಲ್ಲಿ ಓಡಾಡುತ್ತಿದ್ದರು. ಕೆಲವು ಕ್ಷಣ ಅವರಿಬ್ಬರ ನಡುವೆ ಯಾವುದೇ ವಿಧವಾದ ಮಾತುಕತೆ ಇರಲಿಲ್ಲ. ರಾಮುವಿಗೆ 'ಹೇಗಿದ್ದೀರಿ?' ಎಂದು ಕೇಳುವ ಮನಸ್ಸೂ ಬರಲಿಲ್ಲ. ಇಂಥ ಸಮಯದಲ್ಲಿ ಎಂಥ ಸೂಕ್ಷ್ಮಗಳು ಆವರಿಸಿಕೊಂಡಿರುತ್ತವೆ ಎಂಬ ಮನೋಭಾವದಿಂದ ಅವರ ಮುಖವನ್ನೇ ಸ್ವಲ್ಪ ಸಮಯ ನೋಡುತ್ತಾ ಕೂತ. ಕೊನೆಗೆ ಗೋಪಾಲಯ್ಯನವರೇ, 'ನನ್ನ ಬದುಕು ಹೀಗೆ ಕೊನೆಯಾಗ್ತದೆಂದು ಭಾವಿಸಿರಲಿಲ್ಲ. ಹಾಗೆ ನೋಡಿದರೆ ಇಲ್ಲಿರುವ ಎಲ್ಲಾ ನನ್ನ ಆಪ್ತರು ನಾನಾ ರೀತಿಯ ಮನೋರೋಗದಿಂದ ನರಳುತ್ತಿರುವಂಥವರು. ಅವರ ಜೊತೆ ಮಾತಾಡುತ್ತಾ ಹೋದಂತೆಲ್ಲ ದುಗುಡ ವ್ಯಾಪಕಗೊಂಡು ಸುಸ್ತಾಗಿ ಹೋಗುತ್ತೇನೆ. ಕೆಲವೊಮ್ಮೆ ಮಾತಾಡಲಾರೆ ಮತ್ತೆ ಮಾತಾಡದಿರಲೂ ಸಾಧ್ಯವಿಲ್ಲ. ಅಂತಹ ಇಕ್ಕಟ್ಟಿನ ಮನಸ್ಥಿತಿಯಲ್ಲಿ ಒದ್ದಾಡುತ್ತಿದ್ದೇನೆ. ನೋಡಪ್ಪ, ಇದು ನಮ್ಮ ಆಧುನಿಕತೆಯ ಕೊಡುಗೆ. ರಾಮರಾಜ್ಯ, ಸುಖೀರಾಜ್ಯ ಎಂಬುದನ್ನು ಎಷ್ಟು ಕೇಳುತ್ತಾ ಬಂದಿದ್ದೇವೆ. ಆದರೆ ಏನು